## ಶುಭೋದಯ : ಪುನರಾವರ್ತನೆ ಬೇಕೆ?

**ಚಂ**ದನ ವಾಹಿನಿ ಪ್ರತಿನಿತ್ಯ ಬೆಳಗಿನ 7ರಿಂದ ಪ್ರಸಾರ ಮಾಡುತ್ತಿರುವ 'ಶುಭೋದಯ ಕರ್ನಾಟಕ' ಕಾರ್ಯಕ್ರಮ ಅತ್ಯಂತ ಗುಣಮಟ್ಟದ್ದು. ಯಾವುದೋ ಕಾರಣದಿಂದ ಒಂದು ದಿನ ವೀಕ್ಷಿಸಲಾಗದಿದ್ದರೆ ಏನನ್ನೋ ಕಳೆದುಕೊಂಡ ಭಾವನೆ ಮೂಡುವುದೂ ದಿಟ. ಆತ್ಮೀಯವಾಗಿ ಮಾತನಾಡುತ್ತ ಸಂದರ್ಶಕರ ಅನಿಸಿಕೆ, ಅನುಭವಗಳನ್ನು ವೀಕ್ಷಕರಿಗೆ ಪರಿಚಯಿಸುವ ನಿರೂಪಕರೂ ಇಷ್ಟವಾಗುತ್ತಾರೆ. ಇವೆಲ್ಲವೂ ಸರಿ. ಇಂತಹ ಉತ್ತಮ ಕಾರ್ಯಕ್ರಮಕ್ಕೂ ಮರುಪ್ರಸಾರದ ಅವಶ್ಯಕತೆ ಇದೆಯೇ? ಸ್ವಾತಂತ್ರ್ಯ ಹೋರಾಟಗಾರ ಹನುಮಂತಯ್ಯ, ಜನಪದ ಗಾಯಕ ಪಿಚ್ಚಳ್ಳಿ ಶ್ರೀನಿವಾಸ, ಗಾಯಕಿ ರತ್ನಮಾಲಾ ಪ್ರಕಾಶ್, ಸಾಹಿತಿ ಸುಮತೀಂದ್ರ ನಾಡಿಗ್ ಮೊದಲಾದವರೊಂದಿಗಿನ ಮಾತುಕತೆಯ ಕಾರ್ಯಕ್ರಮ ಒಂದೆರಡು ದಿನಗಳ ಅಂತರದಲ್ಲೇ ಮರುಪ್ರಸಾರಗೊಂಡವು. ಪುನರಾವರ್ತನೆಯ ಬದಲಿಗೆ ಕಾರ್ಯಕ್ರಮ ತಯಾರಕರು ನಿತ್ಯವೂ ಹೊಸಬೆಳಗನ್ನು ತರಲಿ ಎಂದು ಆಶಿಸುವೆ.

— ಕೆ.ವಿ. ಮಂಜುನಾಥ್, ಕುಂಟುಗೋಡು

## ಮನೆಮಮಂದಿಯ 'ಫ್ಯಾಮಿಲಿ ಪವರ್'

**ಕ**ಲರ್ಸ್ ಕನ್ನಡದಲ್ಲಿ ಶನಿವಾರ ಮತ್ತು ಭಾನುವಾರ ಮೂಡಿಬರುತ್ತಿರುವ 'ಫ್ಯಾಮಿಲಿ ಪವರ್' ಚೆನ್ನಾಗಿದೆ. ಅದರಲ್ಲೂ ಮೊದಲ ಸುತ್ತು ಫ್ಯಾಮಿಲಿ ರೌಂಡ್ ಸಾಮಾನ್ಯಜ್ಞಾನಕ್ಕೆ ಹೆಚ್ಚು ಪೂರಕವಾಗಿದೆ. ಕುಟುಂಬದ ಬಗ್ಗೆ ಮನೆಮಂದಿಯೆಲ್ಲಾ ತಿಳಿದುಕೊಳ್ಳಲು ಉತ್ತಮ ವೇದಿಕೆ. ಇಂದಿನ ವಿಭಕ್ತ ಕುಟುಂಬದಲ್ಲಿ ಇದು ಹೆಚ್ಚು ಪ್ರಸ್ತುತ ಕೂಡಾ. ಆದರೆ ಪ್ರಶ್ನೆಗಳು ಮಾತ್ರ ಕಿರುತೆರೆ ಪರದೆಯ ಮೇಲೆ ಗೋಚರಿಸುತ್ತವೆಯೇ ಹೊರತು ಉತ್ತರ ಮೂಡಿಬರುವುದಿಲ್ಲ. ತಪ್ಪಾದ ಉತ್ತರವನ್ನು ಪುನೀತ್ ರಾಜಕುಮಾರ್ ಉತ್ತರಿಸಿದರೂ ನನ್ನಂತಹ ಭಾಗಶಃ ಶ್ರವಣದೋಷ ಇರುವವರಿಗೆ ಕೇಳಿಸುವುದೇ ಇಲ್ಲ. ಮೊದಲ ಸುತ್ತಿನ ಎಲ್ಲಾ ಉತ್ತರಗಳು ಕಿರುಪರದೆಯ ಮೇಲೆ ಮೂಡಿಬಂದಿದ್ದರೆ ಚೆನ್ನಾಗಿರುತ್ತಿತ್ತು.

ಈ ಕಾರ್ಯಕ್ರಮವು ಪುನೀತ್ ಅವರ ನಿರೂಪಣ ಶೈಲಿಯಿಂದ ಪ್ರತಿ ಶನಿವಾರ ಮತ್ತು ಭಾನುವಾರ ಕಾಯುವಂತೆ ಮಾಡುತ್ತಿದೆ. ಅವರಿಗೆ ಇದನ್ನು ನಿಭಾಯಿಸುವುದು ನೀರು ಕುಡಿದಷ್ಟೇ ಸಲೀಸಾಗಿದೆ.

–ಮೂಲೆಮನೆ ರತ್ನಾಕರ ಭಿಡೆ, ಬೆಂಗಳೂರು.

## ವಾರದ ಪತ್ರ
## ಚರ್ಚೆಯಲ್ಲಿ ಗದ್ದಲ

ವಾರ್ತಾ ವಾಹಿನಿಗಳಲ್ಲಿ ಪ್ರಸಾರವಾಗುವ ಪ್ರಚಲಿತ ವಿದ್ಯಮಾನಗಳು ಹಾಗೂ ಪ್ರಸಕ್ತ ರಾಜಕೀಯ ವಿಷಯಗಳ ಚರ್ಚಾ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುವ ಎಲ್ಲ ಪಕ್ಷದ ಶಾಸಕರು ಒಬ್ಬರು ಮಾತನಾಡುವಾಗ ಇನ್ನೊಬ್ಬರು ಅಡ್ಡ ಬಾಯಿ ಹಾಕುವ ರೀತಿ ಕೇಳಲು ಅಸಾಧ್ಯ. ಇನ್ನೊಂದು ಕಡೆ ಇಂತಹವರಿಗೆ ನಾವು ಓಟು ಹಾಕಿ ವಿಧಾನ ಸೌಧಕ್ಕೆ ಕಳಿಸಿ ಪಾಪ ಮಾಡಿದೆವು ಎಂದು ಬೇಸರವಾಗುತ್ತದೆ. ವಾರ್ತಾ ವಾಹಿನಿಗಳು ಇಂತಹ ಕಾರ್ಯಕ್ರಮಗಳನ್ನು ಪ್ರಸಾರ ಮಾಡುವ ಮುನ್ನ ಭಾಗವಹಿಸುವ ಎಲ್ಲ ರಾಜಕೀಯ ವ್ಯಕ್ತಿಗಳಿಗೆ ಅವರದೇ ಕಾರ್ಯಕ್ರಮಗಳನ್ನು ಅವರಿಗೇ ತೋರಿಸಿ ಬುದ್ಧಿ ಹೇಳಬೇಕು ಎಂಬುದು ನನ್ನ ಮನವಿ.

—ವಿಜಯ್‌ಕುಮಾರ್ ಎಚ್. ಕೆ., ರಾಯಚೂರು

## ಪಾತ್ರಗಳ ಬದಲಾವಣೆ ಏಕೆ?

ಕಲರ್ಸ್ ಕನ್ನಡದ 'ಮನೇದೇವ್ರು' ಮತ್ತು 'ಪದ್ಮಾವತಿ' ಧಾರಾವಾಹಿಗಳಲ್ಲಿ ಎದ್ದು ಕಾಣುವುದು ದಿಢೀರೆಂದು ಬದಲಾಗುವ ಪಾತ್ರಧಾರಿಗಳು. ಕೆಲವು ಪಾತ್ರಗಳಿಗೆ ಇಂತಹವರೇ ಸರಿ ಎನ್ನುವಂತಿರುವಾಗ ಅವರೇ ಇದ್ದಕ್ಕಿದ್ದಂತೆ ಬದಲಾದರೆ ವೀಕ್ಷಕರಿಗೆ ಅರಗಿಸಿಕೊಳ್ಳುವುದು ಕಷ್ಟ.

'ಮನೇದೇವ್ರು'ನಲ್ಲಿ ಜಾನಕಿ ಪಾತ್ರವನ್ನು ಚೆನ್ನಾಗಿಯೇ ಅಭಿನಯಿಸುತ್ತಿದ್ದ ಅರ್ಚನಾರ ಜಾಗಕ್ಕೆ ಈಗ ರಕ್ಷಿತಾ ಎನ್ನುವವರು ಬಂದಿದ್ದಾರೆ. ಜಾನಕಿ ಎಂದರೆ ಅರ್ಚನಾಳೇ ಸರಿ ಎಂದು ವೀಕ್ಷಕರು ತೀರ್ಮಾನಿಸಿದ್ದರು. ಈಗ ಈ ಹೊಸ ಪಾತ್ರಧಾರಿಯ ಅಭಿನಯಕ್ಕೆ ಬಹಳ ಕಷ್ಟದಿಂದ ಹೊಂದಿಕೊಳ್ಳಬೇಕಾಗಿದೆ. ಅಂತೆಯೇ 'ಪದ್ಮಾವತಿ'ಯಲ್ಲಿ ತಾಯಿ ಪಾತ್ರವನ್ನು ಸಮರ್ಥವಾಗಿ ನಿರ್ವಹಿಸುತ್ತಿದ್ದ ಚಿತ್ರಾ ಶೆಣೈ ಜಾಗಕ್ಕೆ ಈಗ ಅಶ್ವಿನಿ ಗೌಡರವರು ಬಂದಿದ್ದಾರೆ.

—ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ

## ಮತ್ತೆ ಬಂದ 'ಮಾನಸ ಸರೋವರ'

'ಮಾನಸ ಸರೋವರ' ಧಾರಾವಾಹಿ ಉದಯ ಟಿ.ವಿ.ಯಲ್ಲಿ ರಾತ್ರಿ 9.30ಕ್ಕೆ ಪ್ರಸಾರವಾಗುತ್ತಿದೆ. ಪುಟ್ಟಣ್ಣ ಕಣಗಾಲ್ ನಿರ್ದೇಶನದ 'ಮಾನಸ ಸರೋವರ' ಚಲನಚಿತ್ರವನ್ನು ನೋಡಿದಾಗ ಡಿಗ್ರಿಯಲ್ಲಿ ಓದುತ್ತಿದ್ದೆ. ಚಿತ್ರದಲ್ಲಿ ಮಾನಸಿಕ ಡಾಕ್ಟರರಿಗೇ ಹೀರೋಯಿನ್ ಹುಚ್ಚು ಹಿಡಿಸುತ್ತಾಳೆ. ಈಗ ಆಕೆಯ ಮಗಳು ಮಾನಸಿಕ ತಜ್ಞೆಯಾಗಿ ಬಂದು ಹಳೆಯ ಡಾಕ್ಟರರಿಗೆ ಗುಣ ಪಡಿಸುತ್ತಾಳಂತೆ.

—ಎಸ್ಸೆನ್ನೆ, ಕಡೂರು

## ಲಕ್ಷ್ಮಿಗೊಲಿದ ಅದೃಷ್ಟ

'ಝೀ' ಕನ್ನಡ ವಾಹಿನಿಯಲ್ಲಿ 'ಸರಿಗಮಪ ಲಿಟ್ಲ್ ಚಾಂಪ್ಸ್' ಸೀಜನ್ ಹದಿನಾಲ್ಕರ ಅಭ್ಯರ್ಥಿ ಲಕ್ಷ್ಮಿ ರಾತ್ರಿ ಕಳೆದು ಬೆಳಗಾಗುವುದರ ಒಳಗೆ ಮೇಲೆ ಬಂದ ಹುಡುಗಿ. ಆಕೆ ಹಾಡಿದ ಜಾನಪದ ಗೀತೆ 'ಕುಂತ್ರೆ ಕುದುರೆಮ್ಯಾಲ ಬಾರಿ ಡೌಲ, ರಂಗೀಲಾಲ' ಜನಪ್ರಿಯಗೊಂಡಿತು. ಸಾಲದು ಎಂಬಂತೆ ಆಕೆ ಕುರಿತು ಪ್ರಿಪರೇಟರಿ ಪರೀಕ್ಷೆಯಲ್ಲಿ ಪ್ರಶ್ನೆಯನ್ನು ಕೇಳಲಾಯಿತು. ಇದೇ ಹಾಡನ್ನು ನಲವತ್ತು ವರ್ಷಗಳ ಕೆಳಗೆ ಕೇಳಿದ್ದೆ. ಆಗ ಈಗಿನಷ್ಟು ತಂತ್ರಜ್ಞಾನ ಮುಂದುವರಿದಿರಲಿಲ್ಲ. ಹೀಗಾಗಿ ಹಾಡು ಹೇಳಹೆಸರಿಲ್ಲದಂತಾಯಿತು. ಇಲ್ಲಿ ಲಕ್ಷ್ಮಿಯವರ ಅದೃಷ್ಟ ಕೆಲಸ ಮಾಡಿದೆ.

—ಎಸ್.ಎನ್. ಮಹಾಬಲರಾವ್, ನರಸಿಂಹರಾಜಪುರ

## ಸಾಮಾನ್ಯ ಜ್ಞಾನದ ಪ್ರಶ್ನೆಯಿರಲಿ!

ಚಂದನ ವಾಹಿನಿಯಲ್ಲಿ ಡಾ.ನಾ.ಸೋಮೇಶ್ವರ್ ನಡೆಸಿಕೊಡುತ್ತಿರುವ ಮತ್ತು ವೀಕ್ಷಕರ ತಲೆಗೆ ಕೆಲಸ ಕೊಡುತ್ತಿರುವ 'ಥಟ್ ಅಂತ ಹೇಳಿ' ಕಾರ್ಯಕ್ರಮ ಜನಪ್ರಿಯವಾಗಿದೆ. ಇತ್ತೀಚಿನ ಹೊಸ ಸೇರ್ಪಡೆ 'ಹೊಂದಿಸಿ ಹೇಳಿ' ವೀಕ್ಷಕರನ್ನು ಆಕರ್ಷಿಸಿ ಯೋಚಿಸುವಂತೆ ಮಾಡುತ್ತಿದೆ. ಈ ಕಾರ್ಯಕ್ರಮದಲ್ಲಿ ಬರುವ ಐದನೇ ಪ್ರಶ್ನೆ 'ಲೆಕ್ಕವನ್ನು ಪೂರ್ಣಗೊಳಿಸಿ ಅಂತಿಮ ಉತ್ತರ ತಿಳಿಸಿ' ಎಂಬುದರ ಬದಲು ಕರ್ನಾಟಕಕ್ಕೇ ಸಂಬಂಧಿಸಿದಂತೆ, ಸಾಹಿತ್ಯ, ಸಾಹಿತಿಗಳು, ಸಂಸ್ಕೃತಿ, ನೆಲ– ಜಲ ಹೀಗೆ ಯಾವುದೇ ಬೇರೆ ಪ್ರಶ್ನೆ ಕೇಳಬಹುದಲ್ಲವೇ? ಏಕೆಂದರೆ ಈ ಸ್ಪರ್ಧೆಗೆ ಎಲ್ಲಾ ವಯೋಮಾನದವರೂ ಭಾಗವಹಿಸುವುದರಿಂದ ಸಾಮಾನ್ಯ ಜ್ಞಾನದ ಪ್ರಶ್ನೆ ಇದ್ದರೆ ಒಳ್ಳೆಯದು.

—ಶಾಂತಾ ನಾಗರಾಜ್ ಕೆ., ಬೆಂಗಳೂರು

## ರಂಜಿಸುವ 'ಕಾಮಿಡಿ ಕಿಲಾಡಿಗಳು'

ಝೀ ಕನ್ನಡದ 'ಕಾಮಿಡಿ ಕಿಲಾಡಿಗಳು' ಕಾರ್ಯಕ್ರಮ ಬಹಳ ಚೆನ್ನಾಗಿ ಮೂಡಿ ಬರುತ್ತಿದೆ. ಕುಟುಂಬದ ಎಲ್ಲರೂ ಕುಳಿತು ಆನಂದಪಡುವ ಕಾರ್ಯಕ್ರಮ ಇದಾಗಿದೆ. ಜೀವನದಲ್ಲಿ ನಡೆಯುವ ಹಾಸ್ಯ ಪ್ರಸಂಗಗಳನ್ನು ಹೆಕ್ಕಿ ತಗೆದು ನಾಟಕ ರೂಪದಲ್ಲಿ ಪ್ರಸ್ತುತಪಡಿಸುತ್ತಿರುವುದು ಸಂತೋಷದ ವಿಷಯ. ಹೊಸ ಹೊಸ ವಿಷಯಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು ವೀಕ್ಷಕರಿಗೆ ಹಾಸ್ಯದ ಹೊನಲನ್ನು ಹರಿಸುತ್ತಿರುವುದು ಕಾರ್ಯಕ್ರಮದ ಯಶಸ್ಸಿಗೆ ಕಾರಣವಾಗಿದೆ.

—ಕೆ.ಪಿ. ರಾಮಗುಂಡಿ, ಬೈಲಹೊಂಗಲ